ಮುಸ್ಲಿಂ ಮತ್ತು ಹಿಂದೂ ವಿದ್ವಾಂಸರನ್ನೊಳಗೊಂಡ ಒಂದು ಸಮಿತಿ ರಚನೆಯಾಗಿ, ಹಲವು ಸುತ್ತುಗಳ ಚರ್ಚೆಯ ನಂತರ, ಸಿಂಧಿ ಭಾಷೆಯ ಧ್ವನಿ ಮತ್ತು ಧಾಟಿಯನ್ನು ಗಮನಿಸಿ ಪರ್ಶಿಯನ್ ಹಾಗೂ ಅರೇಬಿಕ್ ಲಿಪಿಗಳೇ ಹೆಚ್ಚು ಸೂಕ್ತವಾದುದೆಂಬ ತೀರ್ಮಾನಕ್ಕೆ ಬರಲಾಯಿತು. ಆ ತೀರ್ಮಾನದಂತೆ ಪರ್ಶಿಯನ್ ಮತ್ತು ಅರೇಬಿಕ್ ಅಕ್ಷರಗಳಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡಿಕೊಂಡು 52 ಅಕ್ಷರಗಳಿರುವ ಹೊಸ ಪರ್ಶಿಯೋ–ಅರೇಬಿಕ್ ವರ್ಣಮಾಲೆಯನ್ನು ರೂಪಿಸಲಾಯಿತು. ಈ ಲಿಪಿಯನ್ನು ಎಲ್ಲರೂ ಒಪ್ಪಿಕೊಂಡರು. ಮುಂದೆ ಇದನ್ನು ಬಳಸಿಕೊಂಡು ಸಾವಿರಾರು ಪುಸ್ತಕಗಳೂ ಪ್ರಕಟವಾದವು.

ಆದರೆ ವಿಭಜನೆಯ ನಂತರ, ಬದಲಾದ ಸನ್ನಿವೇಶಗಳಿಗೆ ಅನುಗುಣವಾಗಿ ಸಿಂಧಿ ಭಾಷೆಯು ದೇವನಾಗರಿ ಲಿಪಿಯನ್ನು ಅಳವಡಿಸಿಕೊಳ್ಳಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದರು. ಇದರಿಂದಾಗಿ ಪರ್ಶಿಯೋ–ಅರೇಬಿಕ್ ಮತ್ತು ದೇವನಾಗರಿ ಲಿಪಿಗಳ ಪ್ರತಿಪಾದಕರ ಎರಡು ಗುಂಪುಗಳು ಸೃಷ್ಟಿಯಾಗಿ ವೈಷಮ್ಯ ಆರಂಭವಾಯಿತು. ಸುದೀರ್ಘ ತಕರಾರಿನ ನಂತರ ಸರ್ಕಾರವು ಈ ಎರಡೂ ಲಿಪಿಗಳನ್ನು ಅಧಿಕೃತವಾಗಿ ಮಾನ್ಯ ಮಾಡಿತು. ಮೊದಲೇ ಅಲ್ಪಸಂಖ್ಯಾತರಾಗಿದ್ದ ಭಾರತದ ಸಿಂಧಿ ಜನರು ಈ ಲಿಪಿಗಳ ಕಾರಣಕ್ಕಾಗಿ ಪುನಃ ಎರಡು ಭಾಗಗಳಾಗಿ ಒಡೆದುಹೋದರು. ಈಗ ಸಿಂಧಿ ಭಾಷೆಯನ್ನು ಎರಡೂ ಲಿಪಿಗಳಲ್ಲಿ ಕಲಿಸಲಾಗುತ್ತಿದೆಯಾದರೂ ಬಹುಮಟ್ಟಿಗೆ ರೂಢಿಯಲ್ಲಿರುವುದು ದೇವನಾಗರಿ ಲಿಪಿಯೇ. ಹಿಂದಿಯನ್ನೂ ಒಂದು ಭಾಷೆಯಾಗಿ ಹೇಗೂ ಕಲಿಯಬೇಕಿರುವುದರಿಂದ ಹೊಸ ತಲೆಮಾರು ದೇವನಾಗರಿ ಲಿಪಿಯಲ್ಲಿ ಸಿಂಧಿ ಕಲಿಯುವುದನ್ನೇ ಇಷ್ಟಪಡ್ತಿದೆ. ಏಕೆಂದರೆ ಹಿಂದಿಯೂ ದೇವನಾಗರಿ ಲಿಪಿಯನ್ನೇ ಬಳಸುವುದರಿಂದ ಅಷ್ಟರ ಮಟ್ಟಿಗೆ ಕಲಿಕೆಯ ಶ್ರಮ ಕಡಿಮೆಯಾಗುತ್ತದೆ ಅಂತ ಅವರ ಅಭಿಪ್ರಾಯ. ವಿಪರ್ಯಾಸ ಏನೆಂದರೆ ಪ್ರತಿ ವರ್ಷ ಈಗಲೂ ಪರ್ಶಿಯೋ–ಅರೇಬಿಕ್ ಲಿಪಿಯಲ್ಲಿ ಹಲವಾರು ಸಿಂಧಿ ಕೃತಿಗಳು ಪ್ರಕಟವಾಗುತ್ತಲೇ ಇವೆ. ಆದರೆ ಲಿಪಿ ಗೊತ್ತಿರದ ಕಾರಣಕ್ಕಾಗಿ ತಮ್ಮದೇ ಭಾಷೆಯ ಈ ಕೃತಿಗಳನ್ನು ಈಗಿನ ತಲೆಮಾರಿನವರಿಗೆ ಓದಲಾಗುತ್ತಿಲ್ಲ. ಇದು ಸಿಂಧಿ ಸಾಹಿತ್ಯದ ಒಂದು ಅತ್ಯಂತ ನೋವಿನ ಸಂಗತಿ. ಹಲವಾರು ಸಿಂಧಿ ಯುವ ಲೇಖಕರು ಅಭಿವ್ಯಕ್ತಿಗೆ ಅನುಕೂಲಕರ ಎಂದು ಭಾವಿಸಿ, ನಿಧಾನವಾಗಿ ಇಂಗ್ಲಿಷ್, ಹಿಂದಿ, ಗುಜರಾತಿ ಮತ್ತಿತರೆ ಪ್ರಾದೇಶಿಕ ಭಾಷೆಗಳನ್ನು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಹೀಗೆ ಅಳವಡಿಸಿಕೊಂಡ ಭಾಷೆಗಳಲ್ಲಿಯೂ ಹಲವಾರು ಸಿಂಧಿಗಳು ಒಳ್ಳೆ ಸ್ಥಾನಮಾನವನ್ನು ಗಳಿಸಿಕೊಂಡಿದ್ದಾರೆ.

- ಈಗೀಗ ಸಿಂಧಿ ಭಾಷಾ ಪಠ್ಯವನ್ನು ಪರ್ಶಿಯೋ–ಅರೇಬಿಕ್‌ನಿಂದ ದೇವನಾಗರಿ ಲಿಪಿಗೆ; ದೇವನಾಗರಿಯಿಂದ ಪರ್ಶಿಯೋ–ಅರೇಬಿಕ್ ಲಿಪಿಗೆ ಬದಲಿಸಿ ಕೊಡುವ ತಂತ್ರಾಂಶ ಲಭ್ಯವಿದೆ. ಇದರಿಂದ ಸಿಂಧಿ ಭಾಷೆಗೆ ಆಗಿರುವ ಅನುಕೂಲ/ಅನನುಕೂಲಗಳ ಬಗ್ಗೆ ತಿಳಿಸಿ.

ಹ್ಞಾಂ, ಇಂಥದೊಂದು ತಂತ್ರಾಂಶ ಇರುವುದೇನೋ ನಿಜ. ಆದರೆ ಅದು ಇನ್ನೂ ನಿಖರವಾಗಬೇಕಾದ ಅವಶ್ಯಕತೆಯಿದೆ. ಅದರಲ್ಲಿನ ಸಮಸ್ಯೆಗೆ ಬೇರೆ ಬೇರೆ ಹಲವು ಕಾರಣಗಳಿವೆ. ಅವೆಲ್ಲ ಪರಿಹಾರಗೊಳ್ಳಲು ಸ್ವಲ್ಪ ಸಮಯ ಬೇಕಾಗಬಹುದು. ಈ ಸಂಬಂಧದ ಅಸಡ್ಡೆಗೆ ಮಾತ್ರ ಸಿಂಧಿಗಳೇ ಕಾರಣರಾಗಿದ್ದು ಇದಕ್ಕಾಗಿ ಅವರನ್ನೇ ದೂಷಿಸಬೇಕು. ಅದೇನೇ ಇರಲಿ ಇಂಥ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಕೆಲವು ಸಮರ್ಪಣಾ ಮನೋಭಾವದ ಜನರು ಬೇಕಾಗುತ್ತದೆ. ಕೇವಲ ಬೆರಳೆಣಿಕೆಯಷ್ಟು ಸಾಹಿತಿಗಳು ಮತ್ತು ಪ್ರೊಫೆಸರರಿಂದ ಏನೂ ಮಾಡಲಿಕ್ಕಾಗದು.